ರಾಜ್ಯದಲ್ಲಿರುವ ಜಲಾಶಯಗಳ ಬಗ್ಗೆ

36 (190) :ಡಾ:ಮಹದೇವಪ್ಪಹೆಚ್.ಸಿ. (ಟಿ.ನರಸೀಪುರ)
ಶ್ರೀ ಬಸವರಜ್ ಬೊಮ್ಮಾಯಿ(ಜಲ ಸಂಪನ್ಮೂಲ ಸಚಿವರು.)

1. ರಾಜ್ಯದಲ್ಲಿರುವ ಒಟ್ಟು ಜಲಾಶಯಗಳ ಸಂಖ್ಯೆ ಎಷ್ಟು : ಯಾವ ಜಿಲ್ಲೆಗಳಲ್ಲಿವೆ, ಆ ಜಲಾಶಯಗಳು ನಿರ್ಮಾಣವಾದ ವರ್ಷ ಹಾಗೂ ಇಲ್ಲಿಯವರೆಗೆ ಸದರಿ ಜಲಾಶಯಗಳನ್ನು ನಿರ್ವಹಣೆ ಮಾಡಿಕೊಂಡು ಬಂದಿರುವ ಬಗ್ಗೆ ಸಮಗ್ರ ಮಾಹಿತಿಯನ್ನು ಜಲಾಶಯವಾರು ವಿವರು ಒದಗಿಸವುದು.
2. ರಾಜ್ಯದ ಎಷ್ಟು ಜಲಾಶಯಗಳಲ್ಲಿನ ಹೂಳನ್ನು ತೆಗೆಯಲಾಗಿದೆ, ಅದಕ್ಕೆ ಖರ್ಚಾಗಿರುವ ಹಣವೆಷ್ಟು, ಇನ್ನೂ ಎಷ್ಟು ಜಲಾಶಯಗಳ ಹೂಳನ್ನು ತೆಗೆಯ ಬೇಕಾಕಿದೆ, ಅದಕ್ಕೆ ನಿಗದಿ ಪಡಿಸಲಾಗಿರುವ ಅನುದಾನವೆಷ್ಟು:

3) ಈ ಜಲಾಶಯಗಳಿಂದ ಒಟ್ಟು ಎಷ್ಟು ಎಕರೆ ವ್ಯವಸಾಯದ ಭೂಮಿಗೆ ನೀರನ್ನು ಪೂರೈಸಲಾಗುತ್ತಿದೆ.
4) ಈ ಒಟ್ಟು ವ್ಯವಸಾಯದ ಭೂಮಿಯಲ್ಲಿ ಎಷ್ಟು ಎಕರೆ ಪರಿಶಿಷ್ಟ ಪಂಗಡದ ರೈತರಿಗೆ ಸಂಬಂಧಿಸಿದ ಭೂಮಿಗೆ ನೀರಿನ ಸೌಲಭ್ಯವನ್ನು ಒದಗಿಸಲಾಗಿದೆ: (ಜಲಾಶಯವಾರು ಪ್ರತ್ಯೇಕ ಮಾಹಿತಿಯನ್ನು ಒದಗಿಸುವುದು)?

ಅನುಬಂಧ–1
ರಾಜ್ಯದಲ್ಲಿನ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆ (ಜಲಾಶಯ)ಗಳ ವಿವರ

ಕ್ರ. ಸಂ	ಯೋಜನೆ	ಸಂಗ್ರಹಣಾ ಸಾಮರ್ಥ್ಯ (ಟಿ.ಎಂ.ಸಿಗಳಲ್ಲಿ)
1	ತುಂಗಭದ್ರಾ ಯೋಜನೆ	111.51
2	ವಾಣಿವಿಲಾಸ ಸಾಗರ	30.02
3	ಭದ್ರಾ ಜಲಾಶಯ	71.54
4	ಘಟಪ್ರಭಾ	51.01
5	ಅಂಬ್ಲಿಗೋಳ	0.44
6	ಅಚಿಜನಾಪುರ	1.40
7	ಅರೆಶಂಕರ	0.03
8	ಚಂದ್ರಂಪಳ್ಳಿ	1.21

9	ಭದ್ರಾ ಅಣೆಕಟ್ಟು (ಗೋಂದಿ)	3.37
10	ಚಿತವಾಡಗಿ	0.02
11	ಧರ್ಮ	0.50
12	ಗಾಯತ್ರಿ	0.97
13	ಹಗರಿಬೊಮ್ಮನಹಳ್ಳಿ	2.00
14	ಹತ್ತಿಕುಣಿ	0.35
15	ಜಂಬದಹಳ್ಳ	0.34
16	ಕಳಾಸ್‌ಕೋಪ್	0.02
17	ಕನಕನಾಲಾ	0.23
18	ಕೊಳ್ಳಿ ವಿಯರ್	9.50
19	ನಾಗಥಾಣಾ	0.08
20	ನಾರಾಯಣಪುರ (ಮಧ್ಯಮ)	0.50
21	ನಾರೀಹಳ್ಳ	0.81
22	ರಾಮನಹಳ್ಳಿ	0.21
23	ಸೌದಾಗರ್	0.21
24	ಮುಲ್ಲಾಮಾರಿ ಮೇಲ್ದಂಡೆ	0.75
25	ಕೃಷ್ಣರಾಜಸಾಗರ್	49.44
26	ನುಗು ಜಲಾಶಯ	5.44
27	ಬೈರಮಂಗಳಾ	0.75
28	ಚಿಕ್ಕಹೊಳೆ	0.38
29	ಗುಂಡಾಳ್	0.97
30	ಹೆಬ್ಬಳ್ಳ	0.42
31	ಕಣ್ವ	0.84
32	ಮಂಗಳಾ	0.53
33	ಮಾರ್ಕೋನಹಳ್ಳಿ	2.40
34	ನಲ್ಲೂರು ಅಮ್ಮಣ್ಣಿಕೆರೆ	0.23

ಡಾ: ಹೆಚ್.ಸಿ.ಮಹದೇವಪ್ಪ: ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಸುಮಾರು 63 ಡ್ಯಾಂಗಳಲ್ಲಿ 56,84,000 ಹೆಕ್ಟೇರ್ ನೀರಾವರಿಯಾಗುತ್ತದೆ ಎಂದು ಹೇಳಿದ್ದಾರೆ. ಅದರಲ್ಲಿ ಹೂಳು ಎಷ್ಟು ಡ್ಯಾಂಗಳಲ್ಲಿ ತುಂಬಿದೆ ಎಂದು ಮಾನ್ಯ ಸಚಿವರು ಉತ್ತರದಲ್ಲಿ ಕೊಟ್ಟಿದ್ದಾರೆ. ಡ್ಯಾಂಗಳಲ್ಲಿ ಹೂಳು ತೆಗೆಯುವ ಕಾರ್ಯವನ್ನು

ಪ್ರಾರಂಭ ಮಾಡಿಲ್ಲ ಹೊಸ ಸಂಶೋಧನೆಯ ಮುಖಾಂತರ ತೆಗೆಯಬೇಕೆಂದು ಹೇಳಿ ಅವರು ತಮ್ಮ ಭಾವನೆಯನ್ನು ವ್ಯಕ್ತ ಮಾಡಿದ್ದಾರೆ. ಉದಾಹರಣೆಗೆ ಹೇಳುವುದಾರೆ ನಾನು ಟಿ.ಬಿ.ಡ್ಯಾಂಗೆ ಹೋಗಿದ್ದೆ. ಅಲ್ಲಿ ಇಂಜಿನಿಯರ್‌ಗಳನ್ನು ಕರೆದು ನೋಡುವಾಗ ಆ Original dam ಏನಿತ್ತು, ಅದರ ಕೆಪಾಸಿಟಿ ಮೂರನೇ ಒಂದು ಭಾಗ Silt up ಆಗಿದೆ ಮೂರನೇ ಒಂದು ಭಾಗ ಆ ಡ್ಯಾಂನಲ್ಲಿ Silt up ಆಗಿದ್ದರೆ, ಅಲ್ಲಿ ಅಷ್ಟು ನೀರಿನ ಸಂಗ್ರಹಣದ ಬದಲು ಮಣ್ಣು ತುಂಬಿ ಕಂಡಿದೆ. ಮೂರನೇ ಒಂದು ಭಾಗ ಏನು Capacity water collect ಆಗಬೇಕಿತ್ತು, ಅದು ಶೇಖರಣೆ ಆಗಬೇಕಿತ್ತು ಅಲ್ಲಿ ಅಚ್ಚುಕಟ್ಟಿಗೆ ತೊಂದರೆಯಾಗುತ್ತದೆ. ಅಲ್ಲಿ ಅದಕ್ಕೆ ತೊಂದರೆಯಾದಾಗ ಉತ್ಪಾದನೆ, ಉದ್ಯೋಗ ಮತ್ತು ರಾಜ್ಯದ ಅಭಿವೃದ್ಧಿ ಇವೆಲ್ಲವೂ ಕೂಡ ನಷ್ಟವಾಗುತ್ತದೆ. ಅದಕ್ಕಾಗಿ ಮಾನ್ಯ ಸಚಿವರು ಇದೊಂದು ಮಹತ್ವರವಾದಂತಹ ವಿಷಯವಾಗಿದೆ ಮತ್ತು ದೊಡ್ಡ ವಿಷಯವಾಗಿದೆ. ಹೊಸ ಹೊಸ ತಂತ್ರಜ್ಞಾನದ ಮುಖಾಂತರ ಏನು ಡ್ಯಾಂಗಳಲ್ಲಿ ಇವತ್ತು Silt up ಆಗಿದೆ. Silt ನ್ನು ತೆಗೆದು ನಮ್ಮ ಮೂಲ ನೀರಿನ ಸಂಗ್ರಹಣವನ್ನು ಕಾಯ್ದುಕೊಂಡರೆ ನಮ್ಮ ಅಚ್ಚುಕಟ್ಟುದಾರರ ಹಿತವನ್ನು ಕಾಪಾಡುವುದರ ಜೊತೆಗೆ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಿ ರಾಜ್ಯದ ಜನರಿಗೆ ಉದ್ಯೋಗವನ್ನು ಕೊಡುವುದಾಕ್ಕಾಗುತ್ತದೆ. ಮತ್ತು ಮತ್ತು ವಿದ್ಯುಚ್ಛಕ್ತಿ ಇನ್ನಿತರ ಸಾಮರ್ಥ್ಯಗಳು ಬಳಸಿಕೊಂಡು ರಾಜ್ಯದ ಅಭಿವೃದ್ಧಿಗೆ ಮೂಲಕಾರಣವಾಗುತ್ತದೆ. ಇನ್ನು ಎರಡನೆಯದಾಗಿ ಎಸ್‌ಸಿ:ಎಸ್‌ಟಿ ಒಟ್ಟು ಜಮೀನು ಏಷ್ಟು ಇದೆ. ಎಂದು ಅದಕ್ಕೆ ಇವರು ಉತ್ತರವನ್ನು ಕೊಟ್ಟಿಲ್ಲ. ಹಿಂದೆ ನೀರಾವರಿ ಇಲಾಖೆಯಲ್ಲಿ ಎಸ್‌ಸಿ:ಎಸ್‌ಟಿ ರೈತಾಪಿ ವರ್ಗಗಳಿಗೆ ನೀರಾವರಿ ಇಲಾಖೆಯಲ್ಲಿ 18% ಹಣವನ್ನು ಖರ್ಚು ಮಾಡತ್ತಿರಲಿಲ್ಲ ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ನೀರಾವರಿ ಸಚಿವರಾಗಿದ್ದಾಗ ಮತ್ತು ಮಾನ್ಯ ಈಶ್ವರಪ್ಪನವರು ಇದ್ದಾಗ ನೀರಾವರಿ ಇಲಾಖೆಯಲ್ಲಿಯೂ ಕೂಡ 18% ಹಣವನ್ನು ಕರ್ಚು ಮಾಡಿ ನೀರಾವರಿ ಸಾಮರ್ಥ್ಯವನ್ನು ಹೆಚ್ಚಿಸಬೇಕೆಂದು ಹೇಳಿ ಅದು ಜೋಗು ಮಣ್ಣು ಆಗಿರಬಹುದು. ಬೇರೆಬೇರೆ ತೊಂದರೆಗಳಿಂದ ಸರಿಮಾಡಬೇಕೆಂದು ಆ ಯೋಜನೆಯನ್ನು ಹಾಕಿದ್ದರು. ಅದು ಕೂಡ 56,84,000 ಹೆಕ್ಟೇರ್‌ನಲ್ಲಿ ಏಷ್ಟು ಜನ ಎಸ್ ಸಿ: ಎಸ ಟಿ ರೈತರು ನೀರಾವರಿ ಸಾಮರ್ಥ್ಯಕ್ಕೆ ಒಳಪಟ್ಟಿರುವವರು ಇದ್ದಾರೆ.

ಆ ಬಡವರನ್ನು ಬಡತನದಿಂದ ಮೇಲೆ ಎತ್ತತಕ್ಕಂಥ ಕಾರ್ಯಕ್ರಮಗಳನ್ನು ಸನ್ಮಾನ್ಯಸಚಿವರು, ಸರ್ಕಾರದವರು ನಿರ್ದಿಷ್ಟವಾದ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ಹೇಳಿ ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ (ಮಾನ್ಯ ಜಲಸಂಪನ್ಮೂಲ ಸಚಿವರು): ಮಾನ್ಯ ಸಭಾಧ್ಯಕ್ಷರೇ, ಡಾ: ಹಚ್.ಸಿ. ಮಹದೇವಪ್ಪನವರು ಬಹಳ ಪ್ರಮುಖವಾದ ಮೂಲಭೂತವಾದಂಥ ಪ್ರಶ್ನೆಯನ್ನು ಕೇಳಿದ್ದಾರೆ. ನಮ್ಮ ಜಲಾಶಯಗಳಲ್ಲಿ ಇವತ್ತು ಹೂಳು ತುಂಬಿರುವಂಥ ದೂಡ್ಡ ಪ್ರಮುಖವಾದ ಸಮಸ್ಯೆ ಇದೆ. ಇದಕ್ಕೆ ನಾವು ಹಿಂದೆ

ಜಲಾಶಯಗಳನ್ನು ಮಾಡಿದಾಗ afforestation, soil Conservation ಏನು ಕಾರ್ಯಕ್ರಮವನ್ನು ಹಾಕಿದ್ದೆವು, ಅವುಗಳಿಗೆ ಹೆಚ್ಚಿನ ಗಮನವನ್ನು ಕೊಡದೇ ಇರುವ ಕಾರಣದಿಂದ ಇವತ್ತು ಹೆಚ್ಚಿನ ಹೂಳು ತುಂಬಿವೆ. ಉದಾಹರಣೆಗೆ ಇವತ್ತು ಅಂಕಿ ಅಂಶಗಳನ್ನು ಕೂಡಬೇಕಾದರೆ ರಿಮೋಟ್ ಸೆನ್ಸಿಂಗ್‌ನಿಂದ ನಾವು ಸರ್ವೆ ಮಾಡಿಸಿದ್ದೇವೆ. Hydrology ಸರ್ವೆ ಆಗಬೇಕಾಗಿದೆ. ರಿಮೋಟ್ ಸೆನ್ಸಿಂಗ್‌ನಿಂದ ಸರ್ವೆ ಮಾಡಿದ್ದರಲ್ಲಿ ಇವತ್ತು ಅಲಮಟ್ಟಿ ಜಲಾಶಯದಲ್ಲಿ ಸುಮಾರು 5.3.ಟಿ. ಎಂ.ಸಿ. ವರೆಗೆ ಹೂಳು ತುಂಬಿದೆ, ತುಂಗಭದ್ರಾ ನದಿಯಲ್ಲಿ 28.13 ಟಿ.ಎಂ.ಸಿ. ವರೆಗೆ ಹೂಳು ತುಂಬಿದೆ, ಅಂದರೆ ಸುಮಾರು 29% ಆಗುತ್ತದೆ, ಮಲಪ್ರಭಾದಲ್ಲಿ 2.7 ಟಿ.ಎಂ.ಸಿ ಭದ್ರಾದಲ್ಲಿ 2.1 ಟ.ಎಂ.ಸಿ. ಮತ್ತು ಕೆ.ಆರ್.ಎಸ್. ನಲ್ಲಿ ಸುಮಾರು 2.35 ಟಿ.ಎಂ.ಸಿ. ಹಾರಂಗಿಯಲ್ಲಿ 5.56 ಟಿ.ಎಂ.ಸಿ. ಹೇಮಾವತಿಯಲ್ಲಿ 2.46 ಟಿ.ಎಂ.ಸಿ. ಇಷ್ಟು ನಮ್ಮ ರಿಮೋಟ್ ಸೆನ್ಸಿಂಗ್‌ನಿಂದ ಬಂದಿರುವ ವರದಿ. ಇವುಗಳನ್ನು Hydrology ಯಿಂದ ಸರ್ವೆ ಮಾಡಬೇಂದು ನಾನು ಈಗಾಗಲೇ ಅಧ್ಯಯನ ಮಾಡಿದ್ದೇನೆ. ಇದುವರೆಗೂ ಹೂಳು ತೆಗೆಯಲಿಕ್ಕೆ ತನ್ನದೇ ಆದ ತಾಂತ್ರಿಕ ಹಾಗೂ ಆರ್ಥಿಕ ಸಮಸ್ಯೆ ಇತ್ತು. ಉದಾಹರಣೆಗೆ ತುಂಗಭದ್ರಾದಲ್ಲಿ 28. ಟಿ.ಎಂ.ಸಿ ಹೂ\ಲು ತೆಗೆಯಲಿಕ್ಕೆ 2000ನೇ ಇಸವಿಯಲ್ಲಿ ಅಂದಾಜು ಮಾಡಿದಾಗ ಒಂದು ಸಾವಿರ ಕೋಟಿಗಳಿಗಿಂತ ಹೆಚ್ಚು ಬೇಕಾಗುತ್ತದೆಂದು ಅಂದಾಜು ಮಾಡಿದ್ದರಿಂದ ಒಂದು ಹೊಸ ಡ್ಯಾಮ್ ಅನ್ನೇ ಕಟ್ಟಬಹುದೆಂಬ ದೃಷ್ಟಿಯಿಂದ ಅದನ್ನು ತೆಗೆದುಕೊಳ್ಳಲಿಕ್ಕಾಗಲಿಲ್ಲ, ಆದರೆ ಈಗ ತಂತ್ರಜ್ಞಾನ ಬಹಳಷ್ಟು ಬದಲಾವಣೆ ಆಗಿದೆ. ಹೂಳು ತೆಗೆಯುವುದು ಒಂದು ಕಡೆಯಾದರೆ ಆ ಹೂಳನ್ನು ಯಾವರೀತಿ ಹೊರಗೆ ಹಾಕಬೇಕು, ಅದನ್ನು ಯಾವ ರೀತಿ ನಿಭಾಯಿಸಬೇಕೆಂಬುದು ಬಹಳ ದೊಡ್ಡ ಸವಾಲಿದೆ ಈಗ Hydraulic method ನಲ್ಲಿ Hydro cutting, Hydro delivery ಸಹ ಮಾಡಬಹುದು ಇಟಲಿಯ ಒಂದು ಕಂಪೆನಿಯವರು ಇಟಲಿಯಲ್ಲಿ ಥೈಲಾಂಡ್‌ನಲ್ಲಿ, ಯೂರೋಪ್ ದೇಶದಲ್ಲಿ ನಮ್ಮ ಡ್ಯಾಂಗಳಿಗಿಂತ ದೊಡ್ಡ ಡ್ಯಾಂಗ್‌ಗಳನ್ನು ಮಾಡಿದ್ದೇವೆಂದು ಅವರು ಮುಂದೆ ಬಂದು ಎಲ್ಲ presentation ಮಾಡಿದ್ದಾರೆ, ನಮ್ಮ ತಾಂತ್ರಿಕ ವರ್ಗದವರು ಅದನ್ನು ನೋಡಿದ್ದಾರೆ. ಇವತ್ತು ಬೆಳಗಾಂ ಜಿಲ್ಲೆಯ ದುಗ್ಯಾಳದಲ್ಲಿ ಹೂಳು ತೆಗೆಯಲಿಕ್ಕೆ ಈ ವರ್ಷ Pilot project ಆಗಿ ಪ್ರಾಜೆಕ್ಟ್ ಅನ್ನು ಪ್ರಾರಂಭ ಮಾಡುತ್ತೇವೆ. ಅದರ ರಿಸಲ್ಟ್ ಅನ್ನು ತೆಗೆದುಕೊಂಡು ಮುಂದೆ ಪ್ರಮುಖವಾದ ಡ್ಯಾಂಗಳಲ್ಲಿ ಹೂಳು ತೆಗೆಯುವುದರಲ್ಲಿ ನಾವು ಪ್ರಮುಖವಾಗಿ ಕಾಳಜಿ ವಹಿಸುವುದು ಆ Dam safety ಬಗ್ಗೆ ಕೂಡ ಗಮನದಲ್ಲಿಟ್ಟು ಕೊಂಡು ನಾವು ಕೆಲಸ ಮಾಡಬೇಕಾಗಿದೆ. ಇದರೊಂದಿಗೆ NREG fund ಅನ್ನು ಬಳಕೆ ಮಾಡಿ afforestation ಅನ್ನು ಕ್ಯಾಚ್‌ಮೆಂಟ್ ಏರಿಯಾದಲ್ಲಿ ಯಾವರೀತಿ ಮಾಡಬೇಕು ಆ ರೀತಿ ಈ ವರ್ಷ ದೊಡ್ಡ ಪ್ರಮಾಣದಲ್ಲಿ ನಾವು ತೆಗೆದುಕೊಳ್ಳುವುದಕ್ಕೆ ಈಗಾಗಲೇ

ಅರಣ್ಯ ಇಲಾಖೆಯೊಂದಿಗೆ ಮಾತನಾಡಿದ್ದೇವೆ. ಇದರೊಂದಿಗೆ ಎಸ್.ಸಿ/ ಎಸ್.ಟಿ ಬಗ್ಗೆ ತಾವೇನು ಹೇಳಿದ್ದೀರಿ, ಅದರ ಬಗ್ಗೆ ನಾನೀಗಾಗಲೇ ಸರ್ವೆಗೆ ಆದೇಶ ಮಾಡಿದ್ದೇನೆ. ನಿಮಗೆ ಸ್ಥೂಲವಾಗಿ ಒಂದು figure ಅನ್ನು ಕೊಡಬೇಕಾದರೆ, ನಮ್ಮ ಇಲಾಖೆಯಲ್ಲಿ Special Component Scheme ಗಳಲ್ಲಿ SC/ST ಜನಾಂಗದವರಿಗೆ ನಾವು ಏನು ಕಾರ್ಯಕ್ರಮವನ್ನು ಹಾಕುತ್ತೇವೆ, ಅದರಲ್ಲಿ ಈ ವರ್ಷ SCP/DSP ಯೋಜನೆಯಡಿಯಲ್ಲಿ ಸುಮಾರು 40,560 ರೈತರನ್ನು ನಾವು ಗುರುತಿಸಿದ್ದೇವೆ, ಅವರಿಗೆ ನೀರಾವರಿಗೆ ಬೇಕಾಗುವ ಎಲ್ಲಾ ರೀತಿಯ ಸೌಲಭ್ಯಗಳನ್ನು ಒದಗಿಸುತ್ತಿದ್ದೇವೆ. SC ಜನಾಂಗದವರಿಗೆ 40,560 ST ಗೆ, 6,900, ರೈತರಿಗೆ ಈ ವರ್ಷ ಆ Special Component Scheme ನಲ್ಲಿ ಅಳವಡಿಸಿದ್ದೇವೆ. ಸರ್ವೆ ಆದ ಮೇಲೆ ನಿಮಗೆ ಸಂಪೂರ್ಣವಾದ ವಿವರಗಳನ್ನು ಒದಗಿಸುತ್ತೇವೆ.

ಅಧ್ಯಕ್ಷರು: Sufficient ಉತ್ತರವಾಗಿದೆ.

ಶ್ರೀ ಟಿ.ಬಿ. ಜಯಚಂದ್ರ : ಬಹಳ ಪ್ರಮುಖವಾದ ವಿಚಾರವನ್ನು ಮಹದೇವಪ್ಪನವರು ಪ್ರಸ್ತಾಪ ಮಾಡಿರುವಾಗ ಸರ್ಕಾರದಿಂದ ಮಾನ್ಯ ಸಚಿವರು ಉತ್ತರ ಕೊಡುತ್ತಿದ್ದಾರೆ. ನಮ್ಮ ಎಲ್ಲಾ ಜಲಾಶಯಗಳಲ್ಲಿ ತುಂಬಿರುವಂಥ ಹೂಳನ್ನು ತೆಗೆಸಲು ಹೊಸ ತಾಂತ್ರಿಕತೆಯನ್ನು ಬಳಸುವ ಪ್ರಯೋಗ ಮಾಡುತ್ತದ್ದೇವೆಂಬ ಮಾತನ್ನು ಹೇಳಿದರು. ಈ ಸದನಕ್ಕೆ ಇಷ್ಟು ಹೂಳು ತುಂಬಿದೆ, ಇಷ್ಟು ಟಿ.ಎಂ.ಸಿ ನೀರಿನ ಕೊರತೆಯಾಗುತ್ತಿದೆಯೆಂದು ಮಾತನ್ನು ಹೇಳಿದಿರಿ, ಮತ್ತೊಂದು ಮಾತು ನಿಮ್ಮ ಹಣಕಾಸಿನ ಚೌಕಟ್ಟಿನೊಳಗೆ ಮಾತನಾಡುವುದಾದರೆ ನಿಮ್ಮ ಯಾವುದೇ ರೀತಿಯ ತಂತ್ರಜ್ಞಾನ ಇದ್ದರೂ ಕೂಡ ನೀವು ಈ ಕಾರ್ಯಕ್ರಮವನ್ನು ತೆಗೆದುಕೊಳ್ಳಲಿಕ್ಕೆ ಕಷ್ಟವಾಗುತ್ತದೆಂದು ನನ್ನ ಭಾವನೆ. ನಿಮ್ಮ ಚಿಂತನೆ ಬಗ್ಗೆ ನನಗೆ ವಿರೋಧವಿಲ್ಲ. ಆದರೆ ನಮಗೆ upper criteria state ನವರಿಗೆ ನೀರಿನ ನಷ್ಟವಾಗುತ್ತದೆ, ಅದರ ಲಾಭವಾಗುತ್ತಿರುವುದು ಕೆಳಗಿನ ರಾಜ್ಯದವರಿಗೆ, ಅಂದಾಗ ಆಗಿ ನೀರನ್ನು ಸಂಗ್ರಹ ಮಾಡುವ ಬಗ್ಗೆ ಏಕೆ ಯೋಚನೆ ಮಾಡಲಿಲ್ಲವೆನ್ನುವುದು ಒಂದು ಪ್ರಶ್ನೆ. ಒಂದು ಬೇರೆ ಬೇರೆಯೋಜನೆಗಳಿಗೆ ನೀವು ಆಲೋಕೇಷನ್ಸ್ ಚೇಂಜ್ ಮಾಡುತ್ತಿರುತೀರಿ,ಕೃಷ್ಣಾ ಇರಲಿ, ಕಾವೇರಿ ಇರಲಿ, ಈ ಹೂಳಿನ ಬಗ್ಗೆ ನಿಮ್ಮಲ್ಲಿ ತಾಂತ್ರಿಕವಾದ ವರದಿ ಇದೆ. ಸೆಟಲೈಟ್‌ನ ವರದಿಯಾಧಾರದ ಮೇಲೆ ಜಲಾಶಯಗಳಲ್ಲಿ ಇಷ್ಟು ಹೂಳಿದೆ ಎಂದು ನಿಮಗೆ ವರದಿ ದೊರೆತಾಗ ಅದನ್ನು Re-allocate ಮಾಡುವುದರ ಬಗ್ಗೆ ನಿಮಗೇನಾದರೂ ಚಿಂತೆನೆ ಇದೆಯೇ at least ನಮ್ಮ ನೀರಿನ ಹಕ್ಕನ್ನಾದರೂ ಉಳಿಸಿಕೊಳ್ಳಲಿಕ್ಕೆ ಸಾಧ್ಯವಾಗುತ್ತದೆ. ಇದರಿಂದ ಲಾಭ ನಮ್ಮ ಕೆಳರಾಜ್ಯದವರಿಗೆ ಆಗಬಾರದು ಎಂಬ ಉದ್ದೇಶದಿಂದ ಹೇಳುತ್ತಿದ್ದೇನೆ.

ಶ್ರೀ ಬಸವರಾಜ ಬೊಮ್ಮಾಯಿ: ಬಹಳ ಪ್ರಮುಖವಾದ ವಿಷಯವನ್ನು ಹೇಳಿದ್ದಾರೆ. ತುಂಗಭದ್ರಾದಲ್ಲಿ balancing reservoir ಮಾಡಬೇಕೆಂದು ಹೇಳಿ 9

ಜಲಾಶಯಗಳನ್ನು ಗುರುತಿಸಿ ಯಾವುದೇ ಕ್ರಮಗಳನ್ನು ತೆಗೆದುಕ್ಕೊಳ್ಳದೆ ಅವು ಏಳೆಂಟು ವರ್ಷಗಳಿಂದ ಹಾಗೆ ಬಿದ್ದಿತ್ತು. ಅದರಲ್ಲಿ ನಾವು ಸಂಪೂರ್ಣವಾಗಿ detail survey ಮಾಡಿ ತನಿಖೆಯನ್ನು ಮಾಡಿದ ಮೇಲೆ ಅದರಲ್ಲಿ 9 ರಲ್ಲಿ 4 ಅನ್ನು ಕೂಡಲೇ ತೆಗೆದುಕೊಳ್ಳಬಹುದು, ಇನ್ನು ಉಳಿದ ಐದನ್ನು ಏಕೆ ತೆಗೆದುಕೊಳ್ಳಲಿಕ್ಕಾಗುವುದಿಲ್ಲವೆಂದರೆ ಈಗಾಗಲೇ ನೀರಾವರಿ ಪ್ರದೇಶವೇ ಆಗುತ್ತಿದೆ. 4 balancing reservoir ಮಾಡಲಿಕ್ಕೆ ಈಗಾಗಲೇ ನಾವು ಕ್ರಮವನ್ನು ತೆಗೆದುಕೊಂಡಿದ್ದೇವೆ. ಅದರಲ್ಲಿ ಸುಮಾರು 10 ಟಿ.ಎಂ.ಸಿ. ನೀರನ್ನು ಉಳಿಸಿಕೊಳ್ಳಬಹುದು. ಆ 4 ಬ್ಯಾರೇಜ್ಗಳ ವಿವರವನ್ನು ಕೊಡುತ್ತೇವೆ. ನಿಮ್ಮ ಸಲಹೆಯನ್ನು ಒಪ್ಪಿಕೊಳ್ಳುತ್ತೇವೆ. ಆ Re-allocation ಬಗ್ಗೆ ಚಿಂತನೆಯನ್ನು ಮಾಡುತ್ತೇವೆ.

ಡಾ: ಹೆಚ್.ಸಿ.ಮಹದೇವಪ್ಪ: ಅಧ್ಯಕ್ಷರೇ, ಮಂತ್ರಿಗಳು ಈಗಾಗಲೇ ಸಮರ್ಪಕವಾದ ಉತ್ತರವನ್ನು ಕೊಟ್ಟಿದ್ದಾರೆ. ರಾಜ್ಯದ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು 21 ಟಿ.ಏಂ.ಸಿಯಷ್ಟು ಹೂಳು ತುಂಬಿದೆಯೆಂದರೆ ಇದರ ಬಗ್ಗೆ ಬಹಳ ಗಂಭೀರವಾಗಿ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಿಗೆ ತಿಳಿಸಬಯಸುತ್ತೇನೆ.

ಸಣ್ಣ ನೀರಾವರಿ ಇಲಾಖೆಯ ಕಾಮಗಾರಿಯ ಬಗ್ಗೆ.

37 (06) ಶ್ರೀ ಎ.ಎಸ್.ಪಾಟೀಲ (ನಡಹಳ್ಳೀ)

ಶ್ರೀ ಗೋವಿಂದ ಎಂ. ಕಾರಜೋಳ (ಮಾನ್ಯ ಸಣ್ಣ ನೀರಾವಾರಿ, ಯೋಜನೆ ಹಾಗೂ ಸಾಮಖ್ಯಿಕ ಸಚಿವರು)

ಅ) 2008–09ನೇ ಸಾಲಿನಲ್ಲಿ ಬಿಜಾಪೂರ ಮತ್ತು ಬಾಗಲಕೋಟೆ ಜಿಲ್ಲೆಯಲ್ಲಿ ಹೊಸದಾಗಿ ವಿವಿಧ ಯೋಜನೆಗಳ ಅಡಿಯಲ್ಲಿ ಎಷ್ಟು ಹೊಸ ಕೆರೆಗಳು ಮತ್ತು ಬಾಂದಾರಗಳು ಹಾಗೂ ಇನ್ನಿತರ ಕಾಮಾಗಾರಿಗಳಿಗೆ ಮಂಜೂರಾತಿ ದೊರಕಿದೆ(ಮತಕ್ಷೇತ್ರವಾರು ಅಂಕಿ ಅಂಶ ಅನುದಾನ ಸಹಿತ ಕಾಮಗಾರಿಗಳ ಹೆಸರಿನೊಂದಿಗೆ ವಿವರ ನೀಡುವುದು);

2008–09ನೇ ಸಾಲಿನಲ್ಲಿ ಮಂಜೂರಾತಿ ನೀಡಿ ಕಾಮಗಾರಿಗಳ ವಿವರ ಕೆಳಕಂಡಂತಿದೆ:

ಕ್ರ ಸಂ	ಕಾಮಗಾರಿಯ ವಿವರ	ಬಿಜಾಪುರ ಜಿಲ್ಲೆ	ಬಾಗಲಕೋಟೆ ಜಿಲ್ಲೆ
1	ಕೆರೆಗಳು	07	07